ಒ ಎಸ್ 88-2015

ಪಿಡಬ್ಲ್ಯೂ- 2

(ದಿನಾಂಕ 13-03-2019 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣಿಕರಿಸಲಾಯಿತು.)

**ಪಾಟೀ ಸವಾಲು ಪ್ರತಿವಾದಿ 1 ಮತ್ತು 2 ರ ಪರ ಶ್ರೀ ಬಿ. ಪಿ. ವಕೀಲರಿಂದಃ-**

ವಾದಿಯು ಪ್ರತಿವಾದಿಗಳ ಮೇಲೆ ದಾವೆಯನ್ನು ಹಾಕಿರುತ್ತಾರೆ. ದಾವಾ ಆಸ್ತಿಯನ್ನು ವಾದಿಯು ಹನುಮಂತಶೆಟ್ಟರಿಂದ ಖರೀದಿ ಮಾಡಿರುತ್ತಾರೆ. ದಾವಾ ಆಸ್ತಿಯು ಮೊದಲು ಪರತಿವಾದಿ 1 ಮತು 2 ರ ತಂದೆಗೆ ಸೇರಿದ್ದು ನಂತರ ಹನುಮಂತ ಶೆಟ್ಟರು ಖರೀದಿ ಮಾಡಿರುತ್ತಾರೆ. ವಾದಿಯ ಗಂಡ ಖರೀದಿ ಮಾಡುವಾಗ ಅಳತೆ ಮಾಡಿ ಖರೀದಿ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಉತ್ತರಕ್ಕೆ 60 ಅಡಿ ರಸ್ತೆ ಇದೆ ಎಂದರೆ ಸರಿ. ರಸ್ತೆಗೆ ಹೊಂದಿಕೊಂಡಂತೆ ದಕ್ಷಿಣ ದಿಕ್ಕಿಗೆ ವಾದಿಯ 50 ಅಡಿಗಳ ರಸ್ತೆ ಇದೆ ಎಂದರೆ ಸಾಕ್ಷಿಯು ಇನ್ನು ಸಾಕ್ಷಿ ಇದೆ ಎಂದು ಹೇಳಿರುತ್ತಾರೆ. ನಾನು ಮತ್ತು ಕೈಲಾಸ್ ಹಲವಾರು ಭಾರಿ ಪಂಚಾಯತಿ ಮಾಡಿದ್ದೇವೆ ಎಂದರೆ ಸರಿ. ವಾದಿಗೆ ಅವರ ಆಸ್ತಿ ಸರಿ ಇದೆ ಎಂದು ಹೇಳಿದ್ದೇವೆ ಎಂದರೆ ಸರಿಯಲ್ಲ. ವಾದಿ ವಾದಿಯ ಗಂಡ ಹಲವಾರು ಭಾರಿ ಪಂಚಾಯತಿಗೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪಂಚಾಯತಿ ಅಧಿಕಾರಿಗಳು ವಾದಿ ಮತ್ತು ಪ್ರತಿವಾದಿಯ ಮದ್ಯ ಬಿದರಿನ ತಡಿಕೆ ಹಾಕಿ ಹೋಗಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯು ಯಾವುದೇ ಒತ್ತುವರಿ ಮಾಡಿಕೊಳ್ಳದೇ ಪಿಲ್ಲರ್, ಮೇಲ್ಛಾವಣಿ ಮತ್ತು ಪೈಪ್ ಲೈನ್ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಕೋರ್ಟ್ ಕಮಿಷನರ್ ರವರು ಯಾವುದೇ ರಿಪೋರ್ಟ್ ಕೊಟ್ಟಿಲ್ಲ ಎಂದರೆ ಸರಿ. ಪ್ರತಿವಾದಿ 1 ಮತ್ತು 2 ಯಾವುದೇ ಒತ್ತುವರಿ ಮಾಡದೇ ಇದ್ದರೂ ಸಹ ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿ 3(ಎ) ರಿಂದ (ಇ) ರ ವಕೀಲರಿಂದ ಪಾಟೀ ಸವಾಲು ಇಲ್ಲ.
ಮರು ವಿಚಾರಣೆ :-ಇಲ್ಲ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ,
ಹಗರಿಬೊಮ್ಮನಹಳ್ಳಿ.